ದಿನಾಂಕ 20.02.2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಎಂ ಎನ್ ರವರಿಂದಃ

ಗರ್ಗೇಶ್ವರಿ ಗ್ರಾಮದ ಎಸ್.ಅಬ್ದುಲ್ ಖಾದರ್ ರವರ ಮಗ ಕೆ.ಇಕ್ಬಾಲ್ ಅಹಮದ್ ಎಂದರೆ ನಾನು. ನಾನು ದಾಖಲೆಗಳಿಗೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ಈಗ ತೋರಿಸಿದ ವಕಾಲತ್‌ನಲ್ಲಿ ಇರುವ ಸಹಿ ನನ್ನದು. ಸಾಕ್ಷಿ ವಕಾಲತ್ತಿನಲ್ಲಿರುವ ಸಹಿಯನ್ನು ಒಪ್ಪಿದರಿಂದ ಅದನ್ನು ನಿಡಿ.1 ಎಂದು ಸಾಕ್ಷಿಯ ಸಹಿಯನ್ನು ನಿಡಿ.1(ಎ)ಗುರುತಿಸಲಾಯಿತು. ವಾದಿ ನನ್ನ ತಮ್ಮ. ವಾದಿ ನನ್ನನ್ನು 2 ನೇ ಪ್ರತಿವಾದಿಯನ್ನಾಗಿ ಮಾಡಿದ್ದರು ಎಂದರೆ ಸರಿ. ಸದರಿ ಕೇಸಿನಲ್ಲಿ ನಾನು ಹಾಜರಾಗಿದ್ದೇನೆಂದರೆ ಸರಿ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆಂದರೆ ಸರಿ. ಅದರಲ್ಲಿರುವ ಸಹಿ ನನ್ನದು ಎಂದರೆ ಸರಿ. ಪ್ರತಿವಾದ ಪತ್ರವನ್ನು ನಿಡಿ.2 ಎಂದು, ಅದರಲ್ಲಿರುವ ಸಹಿಗಳನ್ನು ನಿಡಿ.2(ಎ) ಮತ್ತು ನಿಡಿ.2(ಬಿ) ಎಂದು ಗುರುತಿಸಲಾಯಿತು. ನಾನು 9 ನೇ ತರಗತಿವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಕಡಿಮೆ ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ದಿಃ04.08.1999 ರ ಹಕ್ಕು ನಿವೃತ್ತಿ ಪತ್ರದಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಡಿ.3 ಎಂದು ಸಾಕ್ಷಿಯ ಸಹಿಗಳನ್ನು ನಿಡಿ.3(ಎ) ಮತ್ತು ನಿಡಿ.3(ಬಿ) ಎಂದು ಗುರುತಿಸಲಾಯಿತು. (ನಿಡಿ.3 ಕ್ಕೆ ಶುಲ್ಕ ಕಟ್ಟದ ಕಾರಣ ದಂಡ ಮತ್ತು ಶುಲ್ಕ ಲೆಕ್ಕಕ್ಕಾಗಿ ಇಂಪೌಂಡ್ ಮಾಡಿಕೊಳ್ಳಲಾಯಿತು).

ನನ್ನ ತಂದೆಗೆ ಒಟ್ಟು ನನ್ನನ್ನು ಸೇರಿದಂತೆ 3 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು. 1997 ಸಾಲಿನಲ್ಲಿ ನಾವು 7 ಜನ ಮಕ್ಕಳು ಎಲ್ಲರೂ ಬದುಕಿದ್ದೆವು. ವಾದಿ ನನ್ನ ಅಣ್ಣ ಹಾಗೂ ನನ್ನನ್ನು ಸೇರಿಸಿ ದಾವೆ ಹಾಕಿದ್ದಾರೆಂದರೆ ಸರಿ. ವಾದಿ ಸರ್ವೆ ನಂ.45/1 ಕ್ಕೆ ಕೇಸು ಹಾಕಿದ್ದಾರೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ವಾದಿ 16 ಗುಂಟೆಗೆ ಕೇಸು ಹಾಕಿದ್ದಾರೆ. ಸರ್ವೆ ನಂ.45/1 ರಲ್ಲಿರುವ 1 ಎಕರೆ 6 ಗುಂಟೆ ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆಯ ಸ್ವತ್ತು. ನನ್ನ ತಂದೆ ದಾವಾ ಸ್ವತ್ತಿನ ಒಟ್ಟು 1 ಎಕರೆ 6 ಗುಂಟೆಯನ್ನು 1 ನೇ ಪ್ರತಿವಾದಿಗೆ ವಿಭಾಗದಲ್ಲಿ ಕೊಟ್ಟಿದ್ದಾರೆಂದರೆ ಸರಿ. ಸದರಿ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ತಕರಾರು ಇರುವುದಿಲ್ಲ.

1999 ನೇ ಇಸ್ವಿಯಲ್ಲಿ ವಾದಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ವಿಭಾಗದಲ್ಲಿ ಕೊಟ್ಟ ಬಗ್ಗೆ ತಕರಾರು ಮಾಡಿ 1 ನೇ ಪ್ರತಿವಾದಿಯಿಂದ 77,600/- ರೂಪಾಯಿಗಳನ್ನು ವಾದಿ ಪಡೆದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಣ ಪಾವತಿಸಿದ ಬಗ್ಗೆ ನಿಡಿ.2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಸಹಿ ಮಾಡಿರುವುದು ನಿಜ, ಆದರೆ ಹಣ ಕೊಟ್ಟಿರುವುದನ್ನು ನಾನು ನೋಡಿರುವುದಿಲ್ಲ.  ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆ 1997 ರಲ್ಲಿ ವಿಲ್ ಬರೆದಿದ್ದಾರೆ.  ನಾನು ಸದರಿ ವಿಲ್ ನ್ನು ನೋಡಿರುವುದಿಲ್ಲ.  ವಿಲ್‌ನಲ್ಲಿ  ಬರೆದಿರುವ ವಿಚಾರ ಗೊತ್ತಿಲ್ಲ. ವಿಲ್ಲನ್ನು ನರಸೀಪುರದ ತಾಲ್ಲೂಕು ಕಛೇರಿಯಲ್ಲಿ ಬರೆಸಿರುತ್ತಾರೆ ಎಂಬುದು ಗೊತ್ತಿದೆ. ವಿಲ್ಲು ಯಾವ ಸಮಯದಲ್ಲಿ ಬರೆಸಿದ್ದಾರೆಂಬುದು ನನಗೆ ಗೊತ್ತಿಲ್ಲ.  ವಿಲ್ಲಿಗೆ ನಾನು, ವಾದಿ ಮತ್ತು 1 ನೇ ಪ್ರತಿವಾದಿ ಸಹಿ ಮಾಡಿದ್ದಾರೆ.  ನನ್ನ ತಂದೆ ದಾಖಲೆಗಳಿಗೆ ಉರ್ದು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು.  ವಿಲ್ಲಿಗೆ ಉರ್ದುವಿನಲ್ಲಿ ಸಹಿ ಮಾಡಿರುತ್ತಾರೆ. ನನ್ನ ತಂದೆಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತಿರಲಿಲ್ಲ. ನನ್ನ ತಂದೆ ಕನ್ನಡದಲ್ಲಿ ಯಾವ ದಾಖಲೆಗಳಿಗೂ ಸಹಿ ಮಾಡುತ್ತಿರಲಿಲ್ಲ. ವಿಲ್ಲು ಬರೆದವರು ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗಳಾಗಿ ಯಾರು ಸಹಿ ಮಾಡಿದ್ದಾರೆಂಬುದು ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ನನಗೆ ಸಾಕ್ಷಿ ನುಡಿಯುವಂತೆ ಹೇಳಿರುತ್ತಾರೆ. ವಿಲ್ಲು ಬರೆಯುವ ಸಮಯದಲ್ಲಿ  ನನ್ನ ಅಕ್ಕ ತಂಗಿಯರು ಇದ್ದರು. ಅವರ ಸಹಿ ಪಡೆದಿರುವುದಿಲ್ಲ.  ವಾದಿ ನಿಪಿ.1 ವಿಲ್ಲನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ  ಇಲ್ಲ.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ. ನರಸೀಪುರ.